# ಎನ್ಐಟಿಕೆ ಸಂಸ್ಥಾಪನಾ ದಿನ ಆಚರಣೆ



ಮಂಗಳೂರು: ಉಳ್ಳಾಲ ಶ್ರೀನಿವಾಸ ಮಲ್ಯ ಅವರಿಗೆ ಗೌರವ ನಮನ ಸಲ್ಲಿಸುವ ಮೂಲಕ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ಐಟಿಕೆ) 66ನೇ ಸಂಸ್ಥಾಪನಾ ದಿನ ಆಚರಿಸಿತು.

ನಿರ್ದೇಶಕ ಪ್ರೊ. ಬಿ.ರವಿ ಅವರು ಸ್ಥಾಪಕರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಎನ್ಐಟಿಕೆ ಹಳೆ ವಿದ್ಯಾರ್ಥಿ (1969ನೇ ಬ್ಯಾಚ್) ಏರ್ ಮಾರ್ಷಲ್ ಬಿ.ಯು. ಚೆಂಗಪ್ಪ, ಭಾರತೀಯ ವಾಯುಪಡೆಯಿಂದ ಒದಗಿಸಲಾದ ಸುಧಾರಿತ ಟರ್ಬೋಸಾಫ್ಟ್ ಎಂಜಿನ್‌ನ ಪ್ರದರ್ಶನ ಉದ್ಘಾಟಿಸಿದರು. ಇದು ಎನ್ಐಟಿಕೆ ಅಕಾಡೆಮಿ ಫಾರ್ ಡಿಫೆನ್ಸ್ ಅಡ್ವೆಂಚರ್ ಆ್ಯಂಡ್ ಲೀಡರ್‌ಷಿಪ್‌ನ ಭಾಗವಾಗಿದೆ ಎಂದರು. ಸ್ಮಾರ್ಟ್ ಗ್ರಂಥಾಲಯವನ್ನು ಅವರು ಉದ್ಘಾಟಿಸಿದರು.

ಈ ಸಂಸ್ಥೆಯು ನಮ್ಮ ಜೀವನಕ್ಕೆ ಅಡಿಪಾಯ ಹಾಕಿದೆ. ಸಂಸ್ಥೆಯ ಋಣ ತೀರಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ಎನ್ಐಟಿಕೆ ಸಿಬ್ಬಂದಿ ಮಕ್ಕಳಿಗೆ ಬಹುಮಾನ ನೀಡಲಾಯಿತು. 1981ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳು ಸ್ಥಾಪಿಸಿದ ಎರಡು ಮೆರಿಟ್ ವಿದ್ಯಾರ್ಥಿವೇತನಗಳನ್ನು ನೀಡಲಾಯಿತು. ಎನ್ಐಟಿಕೆಯ ಇಬ್ಬರು ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

Prajavani, Date:07/08/25, p no -02